ಪಿಡಬ್ಲ್ಯೂ -1

ಇಂದು ದಿ. 03-08-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧೀಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ಅಂಶಗಳನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಅರ್ಜಿಯ ಜೊತೆ ನನ್ನ ಜಾಗಕ್ಕೆ ಸಂಬಂಧಿಸಿದ ಸರ್ವೆ ನಂ.23/1, ವಡೇರಹಳ್ಳಿ ಗ್ರಾಮ, ಹರಿಹರ ತಾಲ್ಲೂಕಿನ ಪಹಣಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.1 ಎಂದು, ಎರಡು ಪೋಟೋಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಪಿ.2 ಮತ್ತು 3 ಎಂದು ಗುರುತಿಸಲಾಯಿತು. ಈ ದಾಖಲೆಗಳ ಆಧಾರದ ಮೇಲಿಂದ ನಾನು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿಯಿರುತ್ತದೆ.

ಪಾಟೀಸವಾಲುಃ - ಎದುರುದಾರರ ಪರ ವಕೀಲರಿಂದ ಃ

ನಮ್ಮ ಜಮೀನಿನಲ್ಲಿ 2014 ರಲ್ಲಿ ಲೈನ್ ಎಳೆಯಲಾಗಿದೆ ಎಂದರೆ ಸರಿ. ಆ ಸಮಯದಲ್ಲಿ ಕಂಪನಿಯವರು ನಮ್ಮ ಮನೆಗೆ ಬಂದು ನನ್ನ ಒಪ್ಪಿಗೆ ಪಡೆದು ನನ್ನ ಜಮೀನಿನಲ್ಲಿ ಲೈನು ಎಳೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನಗೆ ರೂಪಾಯಿ 20 ಸಾವಿರ ಹಣವನ್ನು ನೀಡಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಕರಾರಿಗೆ ಸಹಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಒಂದು ಬಿಳಿಯ ಹಾಳೆಯ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಜಮೀನಿನಲ್ಲಿ ಟವರ್ ಇಲ್ಲ ಎಂದರೆ ಸರಿ. ನನ್ನ ಜಮೀನಿನಲ್ಲಿ 6 ಮೀಟರ್ ಅಗಲದ ವಿಸ್ತೀರ್ಣದ ಲೈನನ್ನು ಎಳೆಯಲಾಗಿದೆ ಎಂದರೆ ನನಗೆ ತಿಳಿದಿರುವುದಿಲ್ಲ. ನಿ.ಪಿ.2 ಮತ್ತು 3 ರಲ್ಲಿ ಕಾಣುತ್ತಿರುವ ಲೈನು 6 ಮೀಟರ್ ಗಿಂತ ಕಡಿಮೆ ಕಂಡುಬರುತ್ತಿದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ಸದರಿ ಲೈನಿನ ಕೆಳಗಡೆ ಯಾವುದೇ ಮರಗಳನ್ನು ಬೆಳೆಸಬಾರದು ಎಂದು ಕಾನೂನು ಇದೆ ಎಂದರೆ ಸಾಕ್ಷಿಯು ನಾನು ಗಿಡ ನೆಟ್ಟ ನಂತರ ಲೈನನ್ನು ಎಳೆದಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಅರ್ಜಿಯಲ್ಲಿ 35 ಮೀಟರ್ ಅಗಲದ ವಿಸ್ತೀರ್ಣದ ಲೈನನ್ನು ಎಳೆಯಲಾಗಿದೆ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಕಂಪನಿಯವರು ನಮ್ಮ ಜಮೀನಿನಲ್ಲಿ ಲೈನನ್ನು ಎಳೆಯುವಾಗ ನಮಗೆ ದುಡ್ಡು ಕೊಟ್ಟಿದ್ದು, ನಂತರ ನಾವು ಸಹಿ ಹಾಕಿದ ಬಳಿಕವೇ ಲೈನ್ ಎಳೆಯಲು ನಾವು ಅವಕಾಶ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಮಳೆ ಬಂದಾಗ ಮಾತ್ರ ಬೆಳೆ ಬೆಳೆಯಲಾಗುತ್ತದೆ ಎಂದರೆ ಸರಿ. ನಮ್ಮ

ಜಮೀನಿನಲ್ಲಿ ಲೈನ್ ಎಳೆಯುವ ಸಮಯದಲ್ಲಿ ಯಾವುದೇ ಮರ ಇರಲಿಲ್ಲ ಎಂದರೆ ಸರಿಯಲ್. ಸಾಕ್ಷಿಯು ಮುಂದುವರೆದು ಅಲ್ಲಿ ಅಡಿಕೆ ಮರಗಳು ಇದ್ದವು ಎಂದು ನುಡಿದಿರುತ್ತಾರೆ. ನನ್ನ ಅರ್ಜಿಯಲ್ಲಿ ಬಲತ್ಕಾರದಿಂದ ಕಂಪನಿಯವರು ನನ್ನ ಜಮೀನಿನಲ್ಲಿ ಲೈನ್ ಎಳೆದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2019 ರಲ್ಲಿ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸರಿಯಾಗಿದೆ

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.